# ಹವ್ಯಕ ಭಾಷೆ ಮತ್ತು ಸಾಹಿತ್ಯ ವಿಶ್ಲೇಷಣೆ

**ನಯನ ಕುಮಾರಿ ಎಂ.[1] & ರತ್ನಾಕರ ಮಲ್ಲಮೂಲೆ[2]**

[1]ಸಂಶೋಧನ ವಿದ್ಯಾರ್ಥಿ, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಸರಕಾರಿ ಕಾಲೇಜು, ಕಣ್ಣೂರು ವಿಶ್ವವಿದ್ಯಾಲಯ, ಕಾಸರಗೋಡು.

[2]ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಸರಕಾರಿ ಕಾಲೇಜು, ಕಣ್ಣೂರು ವಿಶ್ವವಿದ್ಯಾಲಯ, ಕಾಸರಗೋಡು.

**DOI: https://doi.org/10.5281/zenodo.18469260**

## ABSTRACT:

ಕರ್ನಾಟಕದ ಕರಾವಳಿ ಭಾಗದ ಪ್ರಮುಖ ಸಮುದಾಯವಾದ ಹವ್ಯಕರ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಐತಿಹಾಸಿಕ ಹಾಗೂ ಸಮಕಾಲೀನ ಮಹತ್ವವನ್ನು ಇಲ್ಲಿ ಚರ್ಚಿಸಲಾಗಿದೆ. ವೈದಿಕ ಮತ್ತು ಕೃಷಿ ಸಂಸ್ಕೃತಿಯನ್ನು ಮೇಳೈಸಿಕೊಂಡಿರುವ ಹವ್ಯಕ ಸಮುದಾಯದ ಸಾಮಾಜಿಕ ಹಿನ್ನೆಲೆ, ವಲಸೆ ಇತಿಹಾಸ ಮತ್ತು ಪ್ರಾದೇಶಿಕ ಹೊಂದಾಣಿಕೆಯನ್ನು ವಿವರಿಸುತ್ತಾ, ಹವಿಗನ್ನಡದಲ್ಲಿ ರಚಿತವಾದ ಸಾಹಿತ್ಯಕ ಕೃತಿಗಳ ಮೇಲೆ ಬೆಳಕು ಚೆಲ್ಲಲಾಗಿದೆ. 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ'ದಂತಹ ಆರಂಭಿಕ ನಾಟಕಗಳಿಂದ ಹಿಡಿದು, ಆಧುನಿಕ ಕಥೆ, ಕಾದಂಬರಿ ಮತ್ತು ಯಕ್ಷಗಾನ ಪ್ರಸಂಗಗಳವರೆಗೆ ಹವ್ಯಕ ಸಾಹಿತ್ಯದ ಹರವನ್ನು ಗುರುತಿಸಲಾಗಿದೆ. ಹಳೆಗನ್ನಡ ಮತ್ತು ದ್ರಾವಿಡ ಭಾಷಾ ಮೂಲಗಳನ್ನು ಹೊಂದಿರುವ ಹವಿಗನ್ನಡದ ಭಾಷಿಕ ಅನನ್ಯತೆ, ಗಾದೆ ಮಾತುಗಳ ಸ್ವಾರಸ್ಯ ಮತ್ತು ಶೈಕ್ಷಣಿಕ ಅಧ್ಯಯನಗಳಲ್ಲಿ ಈ ಉಪಭಾಷೆಗಿರುವ ಮಹತ್ವವನ್ನು ವಿಶ್ಲೇಷಿಸಲಾಗಿದೆ. ಒಟ್ಟಾರೆಯಾಗಿ, ಹವ್ಯಕ ಭಾಷೆ ಮತ್ತು ಸಾಹಿತ್ಯವು ಕರಾವಳಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಹೇಗೆ ಪೂರಕವಾಗಿದೆ ಎಂಬುದನ್ನು ನಿರೂಪಿಸಲಾಗಿದೆ.

## KEYWORDS:

ಹವ್ಯಕ ಭಾಷೆ, ಹವಿಗನ್ನಡ ಸಾಹಿತ್ಯ, ಹವ್ಯಕ ಸಂಸ್ಕೃತಿ, ಉಪಭಾಷಾ ಅಧ್ಯಯನ, ಕರಾವಳಿ ಕರ್ನಾಟಕ.

ವೈದಿಕ ಸಂಸ್ಕೃತಿಯನ್ನು ಅಳವಡಿಸಿಕೊಂಡಿರುವ ಹವ್ಯಕ ಸಮುದಾಯವು ಕರ್ನಾಟಕ ರಾಜ್ಯದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಸಾಗರ, ಶಿವಮೊಗ್ಗ, ಶಿರಸಿ, ಸಿದ್ಧಾಪುರ ಹಾಗೂ ಕಾಸರಗೋಡು ಪ್ರದೇಶಗಳಲ್ಲಿ ವ್ಯಾಪಿಸಿದ್ದಾರೆ. ಪೌರೋಹಿತ್ಯದ ಜತೆಗೆ ಕೃಷಿಯನ್ನು ಜೀವನದ ಅವಿಭಾಜ್ಯ ಭಾಗವಾಗಿ ಅಳವಡಿಸಿಕೊಂಡಿರುವ ಇವರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಣನೀಯ ಸಂಖ್ಯೆಯಲ್ಲಿದ್ದು, ಪ್ರಾದೇಶಿಕ ಸಂಸ್ಕೃತಿಯ ಕೊಡುಕೊಳ್ಳುವಿಕೆಯೊಂದಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಸಮುದಾಯವಾಗಿದೆ. ಸಾಮಾಜಿಕ ಜಾತಿಶ್ರೇಣಿ ವ್ಯವಸ್ಥೆಯಲ್ಲಿ ಮೇಲ್ವರ್ಗವೆಂದು ಗುರುತಿಸಿಕೊಂಡಿರುವ ಹವ್ಯಕರು ಶೈಕ್ಷಣಿಕವಾಗಿಯೂ ಮುಂದುವರೆದವರಾಗಿದ್ದು, ಸುಮಾರು ಸಾವಿರ ವರ್ಷಗಳಿಗಿಂತಲೂ ಮೊದಲೇ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ (ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು)ಗೆ ವಲಸೆ ಬಂದವರಾಗಿದ್ದಾರೆ. ಹವ್ಯಕ ಭಾಷೆ, ಸಾಹಿತ್ಯ ಮತ್ತು ಸಾಹಿತ್ಯದಲ್ಲಿನ ಸಂಸ್ಕೃತಿಯ ಒಳನೋಟದಿಂದ ಕರಾವಳಿಯ ನಾಗರಿಕತೆ ಮತ್ತು ಚಾರಿತ್ರಿಕ ಬೆಳವಣಿಗೆಗಳನ್ನು ತಿಳಿಯಲು ಸಾಧ್ಯ.

ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ಹವ್ಯಕರನ್ನು ಕಾಣಬಹುದಾದರೂ ಅದರಲ್ಲಿ ಬಹುಪಾಲು ಕುಟುಂಬವನ್ನು ಕಾಸರಗೋಡು ಸೇರಿದಂತೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣಬಹುದು. ಉತ್ತರ ಕರ್ನಾಟಕ ಭಾಗದಲ್ಲಿರುವ ಭಾಷೆ ಮತ್ತು ಸಂಸ್ಕೃತಿಯಲ್ಲಿ ಇಲ್ಲಿಗಿಂತಲೂ ಭಿನ್ನತೆಗಳಿವೆ. ಹವ್ಯಕ ಕನ್ನಡದಲ್ಲಿ ಪ್ರಕಟಗೊಂಡ ಸಾಹಿತ್ಯ ಕೃತಿಗಳಲ್ಲಿ ಕಾವ್ಯಗಳು ಕಡಿಮೆ. ಆದರೆ ಸಣ್ಣಕತೆಗಳು, ಕಾದಂಬರಿಗಳು, ನಾಟಕಗಳು ಹಾಗೂ ಪ್ರಬಂಧ ಸಾಹಿತ್ಯಗಳು ಹೇರಳವಾಗಿವೆ.

ಸುದೀರ್ಘ ಕಾಲದ ಹಿಂದೆ ವಲಸೆ ಬಂದ ಸಮುದಾಯವೊಂದು ತನ್ನ ಮೂಲಭೂತವಾದ ಸಂಸ್ಕೃತಿಯನ್ನು ಬಿಡದೆಯೂ ಪ್ರಾದೇಶಿಕ ಸಂಸ್ಕೃತಿಯ ಭಾಷೆ, ಕಲೆ, ಆರಾಧನೆ ಹಾಗೂ ಬದುಕಿನ ರೀತಿ ರಿವಾಜುಗಳನ್ನು ಅಳವಡಿಸಿಕೊಂಡು ಸ್ಥಳೀಯತೆಯ ಹೊಂದಾಣಿಕೆಯೊಂದಿಗೆ ಬದುಕುವ ಜೀವನಕ್ರಮವನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಪಡಿಸಿರುವ ರೀತಿಯನ್ನು ಅಧ್ಯಯನದಿಂದ ಕಂಡುಕೊಳ್ಳಲು ಸಾಧ್ಯ. ಹವ್ಯಕ ಭಾಷೆ ಮತ್ತು ಸಾಹಿತ್ಯದ ವ್ಯಾಪ್ತಿ ವಿಶಾಲವಾಗಿದ್ದು, ಕಾಸರಗೋಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹವ್ಯಕ ಭಾಷೆಯಲ್ಲಿ ರಚಿತವಾದ ಸಾಹಿತ್ಯಕ ಕೃತಿಗಳಲ್ಲಿ ವ್ಯಕ್ತಗೊಂಡ ಹವ್ಯಕ ಸಂಸ್ಕೃತಿಯನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ. ಕರಾವಳಿಯ ಹವಿಗನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಅಕಾಡೆಮಿಕ್ ನೆಲೆಯ ಆಳವಾದ ಅಧ್ಯಯನವು ಇದುವರೆಗೆ ವ್ಯವಸ್ಥಿತವಾಗಿ ನಡೆದಿಲ್ಲ. ೧೮೮೭ರಲ್ಲಿ ರಚನೆಯಾದ ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ನಾಟಕವೆಂಬ ಹೆಗ್ಗಳಿಕೆಗೆ ಪಾತ್ರವಾದ ಸೂರಿ ವೆಂಕಟ್ರಮಣ ಶಾಸ್ತ್ರಿಗಳ 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ'ದಿಂದ ತೊಡಗಿ, ಇತ್ತೀಚೆಗೆ ಪ್ರಕಟಗೊಂಡ ಬಾಳಿಲ ಪರಮೇಶ್ವರ ಭಟ್ಟರ ಧರ್ಮವಿಜಯ ಎಂಬ ಮಹಾಕಾವ್ಯದವರೆಗೆ ಹವಿಗನ್ನಡ ಭಾಷೆಯಲ್ಲಿ ಪ್ರಕಟವಾದ ಕೃತಿಗಳು ಹಲವಾರು.

ಕನ್ನಡದ ಒಂದು ಉಪಭಾಷೆಯಾಗಿರುವ ಹವ್ಯಕ ಕನ್ನಡ ಅಥವಾ ಹವಿಗನ್ನಡವನ್ನು ಇತರ ಉಪಭಾಷೆಗಳಿಗೆ ಹೋಲಿಸಿದರೆ ಈ ಭಾಷೆಯಲ್ಲಿ ರಚಿತವಾದ ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯವು ಗಮನಾರ್ಹವಾದುದು. ಈ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಹವ್ಯಕರ ಬದುಕು ಮತ್ತು ಸಂಸ್ಕೃತಿಯ ಚಿತ್ರಣಗಳು ಅನಾವರಣಗೊಳ್ಳುತ್ತವೆ. ಆದರೆ ಈ ಕುರಿತು ಆಳವಾದ ವಿಶ್ಲೇಷಣಾತ್ಮಕ ಅಧ್ಯಯನಗಳು ಇದುವರೆಗೆ ನಡೆದಿಲ್ಲ. ಈ ಕಾರಣದಿಂದ ಈ ಸಂಶೋಧನಾ ಲೇಖನಕ್ಕೆ ಮಹತ್ವವಿದೆ. ವಿಶ್ವವಿದ್ಯಾಲಯದ ಪಠ್ಯಗಳಲ್ಲಿ ಹವ್ಯಕ ಭಾಷಾ ಸಾಹಿತ್ಯವು ಇತ್ತೀಚೆಗೆ ಸ್ಥಾನಪಡೆದುಕೊಂಡಿದ್ದು, ಈ ಉಪಭಾಷೆಗೆ ಶೈಕ್ಷಣಿಕ ಸ್ಪರ್ಶವೊದಗಿದೆ. ಆದ ಕಾರಣ ಈ ಲೇಖನವು ಶೈಕ್ಷಣಿಕ ಮುನ್ನಡೆಯ ದೃಷ್ಟಿಯಿಂದಲೂ ಮಹತ್ವವೆನಿಸುತ್ತದೆ. ಈ ಹಳೆಯ ಕನ್ನಡದ ಉಪಭಾಷೆಯನ್ನು ಈಗಲೂ ಉಳಿಸಿಕೊಂಡು ಈ ಭಾಷೆಯಲ್ಲಿ ಸಾಹಿತ್ಯ ಕೃಷಿಯನ್ನು ಮಾಡುತ್ತಿರುವ ಹವ್ಯಕ ಸಮಾಜದ ಸಾಮಾಜಿಕ, ಸಾಂಸ್ಕೃತಿಕ ಅನನ್ಯತೆಗಳ ಬಗ್ಗೆ ಹವ್ಯಕ ಭಾಷೆ ಹಾಗೂ ಸಾಹಿತ್ಯದ ಅಧ್ಯಯನದಿಂದ ತಿಳಿಯಲು ಸಾಧ್ಯ. ತನ್ನ ಆಚಾರ ವಿಚಾರ ಹಾಗೂ ಜೀವನಕ್ರಮಕ್ಕೆ ಸಂಬಂಧಪಟ್ಟ ಸಂಸ್ಕೃತಿಯ ಬಗ್ಗೆ ಮತ್ತು ಸಂಸ್ಕೃತಿಯ ಒಳ ಹೂರಣಗಳ ಬಗ್ಗೆ ಹವಿಗನ್ನಡ ಭಾಷೆಯಲ್ಲಿ ರಚಿತವಾದ ಸಾಹಿತ್ಯ ಕೃತಿಗಳಿಂದ ತಿಳಿಯಬಹುದು. ಅದೇ ರೀತಿಯಲ್ಲಿ ಹವ್ಯಕ ಭಾಷೆ ಮತ್ತು ಸಾಹಿತ್ಯವನ್ನು ಆಳವಾದ ಅಧ್ಯಯನಕ್ಕೆ ಒಳಪಡಿಸುವುದರಿಂದ ಸ್ಥಳೀಯವಾದ ಸೂಕ್ಷ್ಮ ಚಾರಿತ್ರಿಕ ವಿಷಯಗಳನ್ನು ಕಂಡುಕೊಳ್ಳಬಹುದು. ಇಂತಹ ಉಪಸಂಸ್ಕೃತಿಗಳ ಬಿಡಿ ಬಿಡಿ ಸಾಹಿತ್ಯಕ ಅಧ್ಯಯನವು ಒಟ್ಟು ಭಾರತೀಯ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾದುವುಗಳಾದ ಕಾರಣ ಸಮುದಾಯ ಕೇಂದ್ರಿತ ಭಾಷೆ ಸಾಹಿತ್ಯದ ಅಧ್ಯಯನಗಳಿಗೆ ಮಹತ್ವವಿದೆ. ಹವ್ಯಕ ಭಾಷೆ, ಸಾಹಿತ್ಯದ ಆಳವಾದ ವಿಶ್ಲೇಷಣೆಯೊಂದಿಗೆ ಹವ್ಯಕ ಸಂಸ್ಕೃತಿಯ ಮತ್ತು ಸಾಹಿತ್ಯದ ಒಳನೋಟಗಳನ್ನು ಈ ಲೇಖನದಲ್ಲಿ ಕಂಡುಕೊಳ್ಳಲಾಗಿದೆ.

ದಕ್ಷಿಣ ಕನ್ನಡ ಹವ್ಯಕ ಸಂಸ್ಕೃತಿ ಎಂಬುದು ಬಿ.ಎನ್ ಮಹಾಲಿಂಗ ಭಟ್ ಅವರ ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ. ಇದರಲ್ಲಿ ಹವ್ಯಕರ ಸಂಸ್ಕೃತಿಯ ಬಗೆಗಿನ ಅಧ್ಯಯನ ನಡೆಸಿದ್ದರೂ ಇದು ಸಾಹಿತ್ಯಕ ಅಧ್ಯಯನವಲ್ಲ. ಹವ್ಯಕ ನಡೆನುಡಿ ಸಂಸ್ಕೃತಿ ಬಗ್ಗೆ ಡಾ. ಕೆ.ಜಿ ಶಾಸ್ತ್ರಿ, ಡಾ. ಎಲ್ ಆರ್ ಹೆಗಡೆ, ಪ್ರೊ. ಮರಿಯಪ್ಪ ಭಟ್ಟ, ಹೆಲೆನ್ ಉಲ್ ರಿಚ್, ಡಾ. ಬಿ. ಎನ್ ಶಂಕರ ಭಟ್ಟ, ಡಾ. ಶಾಲಿನಿ ರಘುನಾಥ, ಡಾ. ತಾಳ್ತಜೆ ಕೇಶವ ಭಟ್ಟ, ಡಾ. ಹರಿಕೃಷ್ಣ ಭರಣ್ಯ, ತಾಳ್ತಜೆ ಕೃಷ್ಣ ಭಟ್ಟ, ಪ್ರಮೋದ ಪಾಂಡೆ, ಡಾ. ಕೆ. ಪಿ ಭಟ್ಟ, ಡಾ. ಬಿ ಚಂದ್ರಶೇಖರ ಭಟ್ಟ, ಡಾ. ಪಿ. ಶ್ರೀಕೃಷ್ಣ ಭಟ್ಟ, ಡಾ. ಉಪ್ಪಂಗಳ ರಾಮಭಟ್ಟ, ಡಾ. ಶ್ರೀಕೃಷ್ಣ ಭಟ್ ಅರ್ತಿಕಜೆ, ಶಂ.ನಾ. ಖಂಡಿಗೆ, ಪ್ರೊ. ವಿ.ಬಿ ಮೊಳೆಯಾರ ಈ ಮುಂತಾದ ಹಲವು ವಿದ್ವಾಂಸರು ಹವ್ಯಕ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಯ ಕುರಿತು ಲೇಖನಗಳಲ್ಲಿ ಮತ್ತು ಕೃತಿಗಳಲ್ಲಿ ವಿವರಿಸಿದ್ದಾರೆ. ಡಾ. ಶ್ರೀಕೃಷ್ಣ ಭಟ್ ಅರ್ತಿಕಜೆ ಮತ್ತು ಡಾ. ಹರಿಕೃಷ್ಣ ಭರಣ್ಯರು ಸಂಪಾದಿಸಿದ ನುಡಿ

– ಸಂಸ್ಕೃತಿ (ಹವ್ಯಕ ಪಡೆನುಡಿ ಕೋಶ) ಕೃತಿಯಲ್ಲಿ ಗಾದೆಗಳು, ಬಾಲಭಾಷೆ, ಬೈಗುಳ ಪದ, ಹೇಳಿಕೆಗಳು ಹೀಗೆ ಹಲವು ಕ್ರಿಯಾವಿಶೇಷತೆಗಳನ್ನು ನೀಡಿದ್ದಾರೆ. ವಿ.ಬಿ ಕುಳಮರ್ವ ಅವರು ರಚಿಸಿದ ಹವಿ – ಸವಿ ಕೋಶವು ಹವ್ಯಕ ಭಾಷೆಯ ಸಾಂಸ್ಕೃತಿಕ ಪದಗಳನ್ನು ಪರಿಚಯಿಸುವ ಕೃತಿ. ಇವೆಲ್ಲವೂ ಹವ್ಯಕ ಭಾಷೆಯ ಅಧ್ಯಯನಕ್ಕೆ ಸಹಾಯಕ. ಇವುಗಳಲ್ಲದೆ ಡಾ. ಹರಿಕೃಷ್ಣ ಭರಣ್ಯರ ಹವಿಗನ್ನಡ – ನುಡಿ/ಸಂಸ್ಕೃತಿ/ ಸಾಹಿತ್ಯ ಅಧ್ಯಯನ ಎಂಬ ಕೃತಿಯಲ್ಲಿ ಹಲವು ಮಾಹಿತಿ ಮತ್ತು ವಿಶ್ಲೇಷಣೆಗಳು ದೊರಕುತ್ತವೆ.

**ಹವ್ಯಕ ಭಾಷೆ ಮತ್ತು ಸಾಹಿತ್ಯ**

ಹವ್ಯಕ ಎಂಬುದು ಒಂದು ಸಮುದಾಯವನ್ನು ಸೂಚಿಸುವುದಾದರೆ ಹವ್ಯಕ ಭಾಷೆ ಅಥವಾ ಹವಿಗನ್ನಡ ಎಂಬುದು ಕನ್ನಡದ ಉಪಭಾಷೆ. ಹವಿಗನ್ನಡ ಎಂಬುದು ಕನ್ನಡದ ಪ್ರಧಾನ ವಾಹಿನಿಗೆ ಪೂರಕವಾದ ಭಾಷೆ. ಇದು ಪ್ರಾಚೀನ ಕನ್ನಡ, ಆಧುನಿಕ ಕನ್ನಡಕ್ಕೆ ಹೆಚ್ಚು ಹತ್ತಿರದಲ್ಲಿದೆ. ಹವಿಗನ್ನಡ ಭಾಷೆಯಲ್ಲಿ ಸ್ಥಳೀಯ ವ್ಯತ್ಯಾಸಗಳಿವೆ. ಅದೇ ರೀತಿಯಲ್ಲಿ ಗೌಡ ಕನ್ನಡ ಹಾಗೂ ಮಲೆಯಾಳ ಭಾಷೆಗಳಿಂದ ಸಾಕಷ್ಟು ಪ್ರಭಾವಿತಗೊಂಡ ಭಾಷೆಯಿದು. ಈ ಕಾರಣದಿಂದ ಕಾಸರಗೋಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಹವ್ಯಕ ಭಾಷೆಯಲ್ಲಿ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಲು ಸಾಧ್ಯವಿದೆ. ಹವಿಗನ್ನಡ ಭಾಷೆ ಮತ್ತು ಸಾಹಿತ್ಯವನ್ನು ಅವಲೋಕಿಸಿದಾಗ ಇದರಲ್ಲಿ ದ್ರಾವಿಡ ಭಾಷೆಗಳ ವಿವಿಧ ಪದಗಳಿರುವುದನ್ನು ಕಾಣುತ್ತೇವೆ. ಹಳೆಗನ್ನಡ, ನಡುಗನ್ನಡ ಪದಪುಂಜಗಳೊಂದಿಗೆ ಇತರ ದ್ರಾವಿಡ ನುಡಿಗಳಾದ ತಮಿಳು, ತೆಲುಗು, ಮಲೆಯಾಳ ಹಾಗೂ ತುಳುಭಾಷೆಯ ಪದಗಳು ಸೇರಿಕೊಂಡಿರುವುದನ್ನು ಕಾಣುತ್ತೇವೆ. ಕೆಲವು ಭಾಷಾ ವಿಜ್ಞಾನಿಗಳು ಈಗಾಗಲೇ ಈ ಉಪಭಾಷೆಯ ಕುರಿತು ಆಸಕ್ತರಾಗಿದ್ದು, ಕೆಲವೊಂದು ಸ್ಥೂಲರೂಪದ ಅಧ್ಯಯನಗಳು ನಡೆದಿವೆ. ಭಾಷಾ ವಿಜ್ಞಾನಿ ಡಾ. ಡಿ. ಎನ್ ಶಂಕರಭಟ್ಟರು, ಹವ್ಯಕ ವಾರ್ತೆ ಎಂಬ ೧೯೯೮ರಲ್ಲಿ ಪ್ರಕಟವಾದ ಸಂಚಿಕೆಯಲ್ಲಿ 'ನಮ್ಮ ಮನೆ ಮಾತು ಎಂತಹುದು?' ಎಂಬ ಲೇಖನದಲ್ಲಿ, ''ಹವ್ಯಕ ಭಾಷೆಯ ಕೆಲವು ವಿಷಯಗಳು ಹಳೆಗನ್ನಡಕ್ಕೆ ಸಮನಾಗಿವೆ. ಕರಾವಳಿಯ ಕನ್ನಡ ಪ್ರಭೇದಗಳು ಏಳನೆಯ ಶತಮಾನಕ್ಕಿಂತ ಹಿಂದೆಯೇ ಇತ್ತು. ಅಲ್ಲದೆ, ವ್ಯಾಕರಣದ ಮಟ್ಟಿಗೆ ಹೇಳುವುದಾದರೆ ಹಳೆಗನ್ನಡದಲ್ಲಿಯೂ ಕಾಣಸಿಗದಂತಹ ಕೆಲವು ವೈಶಿಷ್ಟ್ಯಗಳು ಹವ್ಯಕ ಮತ್ತು ಇತರ ಕರಾವಳಿ ಪ್ರಭೇದಗಳಲ್ಲಿ ಕಾಣಿಸುತ್ತಿದ್ದು, ಕನ್ನಡದ ಲಿಪಿಯ ಹಿಂದಿನ ಶಾಸನಗಳಿಗಿಂತಲೂ ಮೊದಲೇ ಈ ಪ್ರಭೇದಗಳು ಬೇರಾಗಿದ್ದುವೆಂದು ಹೇಳಲು ಬರುತ್ತದೆ,'' ಎಂದಿದ್ದಾರೆ.

ಹವ್ಯಕ ಭಾಷಾ ಸಾಹಿತ್ಯ ಎಂದಾಗ, ಹವ್ಯಕರಿಗೆ ಮಾತ್ರ ಸಂಬಂಧಿಸಿದ ಸಾಹಿತ್ಯ ಎಂಬರ್ಥ ಸ್ಫುರಿಸುವ ಸಂದರ್ಭ ಹೆಚ್ಚು. ಆದರೆ ಹವ್ಯಕೇತರರು ಹವಿಗನ್ನಡ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ಶಿವರಾಮ ಕಾರಂತರ ಪ್ರಸಿದ್ಧ ಕಾದಂಬರಿ 'ಬೆಟ್ಟದ ಜೀವ'ದಲ್ಲಿ ಹವ್ಯಕ ಸಮುದಾಯದ ಆಚಾರ ವಿಚಾರಗಳು ಬರುತ್ತವೆ. ಡಾ.

ನಾ. ಮೊಗಸಾಲೆ, ಭಾರತೀಸುತ, ನಾ.ಸು ಭರತನಹಳ್ಳಿ, ಗಂಗಾ ಪಾದೆಕಲ್ಲು, ತಾಳ್ತಜೆ ಕೃಷ್ಣ ಭಟ್ಟ, ತಲೆಂಗಳ ರಾಮಕೃಷ್ಣ ಭಟ್ಟ ಮೊದಲಾದವರ ಕೃತಿಗಳಲ್ಲಿ ಹವ್ಯಕ ಸಂಸ್ಕೃತಿಯ ಅನಾವರಣವಿದೆ. ಡಾ. ಹರಿಕೃಷ್ಣ ಭರಣ್ಯರ 'ದೊಡ್ಡ ಜಾಲು' ಕಾದಂಬರಿಯಲ್ಲಿ ಹವ್ಯಕ ಸಮಾಜದ ರೀತಿನೀತಿ, ನಡವಳಿಕೆಗಳು, ಭಾಷೆ ಹಾಗೂ ಬೇರೆ ಬೇರೆ ನುಡಿಗಟ್ಟುಗಳನ್ನು ಕಾಣಬಹುದು. ಡಾ. ಸಬಿತಾ ಮರಕಿಣಿಯವರ 'ಮುಗಿಲು ಬಿರಿಯಿತು', 'ಕಮಲಕ್ಕನ ಕತೆ', 'ಪಾಮಕ್ಕನ ಸಂಸಾರ', 'ಗೆದ್ದಳು ಕಾವೇರಿ' ಈ ಮುಂತಾದ ಕಾದಂಬರಿಗಳಲ್ಲಿ ಹವ್ಯಕ ಸಮಾಜದ ಜೀವನಾವರ್ತನ ಕ್ರಿಯೆಗಳು, ಸಾಮಾಜಿಕ ಒಡಂಬಡಿಕೆ ಈ ಮುಂತಾದ ವಿಚಾರಗಳನ್ನು ಗುರುತಿಸಬಹುದು. ಹವ್ಯಕ ಆಡುನುಡಿಯಲ್ಲಿ ಮೊತ್ತಮೊದಲು ಪ್ರಕಟಗೊಂಡ ಸ್ವತಂತ್ರ ಸಾಮಾಜಿಕ ನಾಟಕಕ್ಕೆ ಶತಮಾನದ ಇತಿಹಾಸವಿದೆ. 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ' ಈ ಕೃತಿಯು ಹೊಸಗನ್ನಡದ ಆರಂಭದ ನಾಟಕವೂ ಹೌದು. ಇದರ ಕರ್ತೃ ವೆಂಕಟರಮಣ ಶಾಸ್ತ್ರಿಗಳು ಹತ್ತೊಂಬತ್ತನೆಯ ಶತಮಾನದ ಹವ್ಯಕ ಸಮಾಜದ ಆಚಾರ ವಿಚಾರಗಳನ್ನು ಚಿತ್ರಿಸಿದ್ದಾರೆ. ನರ್ಕಳ ಮಾರಪ್ಪ ಶೆಟ್ಟರ 'ಕೂಸಕ್ಕನ ಮದುವೆ', ಇಪ್ಪತ್ತೊಂದು ನಾಟಕಕಾರರು ರಚಿಸಿದ ನಾಟಕ ಸಂಕಲನ 'ಹವಿಗನ್ನಡ ನಾಟಕ ಸಂಪುಟ' ಕೃತಿಯಲ್ಲಿ ಹವ್ಯಕ ಸಮಾಜದ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗುರುತಿಸಬಹುದು. ಅನುಪಮ ಉಡುಪುಮೂಲೆಯವರ 'ಹತ್ತಗಳು' ಕಥಾಸಂಕಲನ, ವಿಜಯಾ ಸುಬ್ರಹ್ಮಣ್ಯ ಅವರ 'ಹತ್ತೆಸಳು' – 'ಸಂಪುಟ ಒಂದು ಮತ್ತು ಎರಡು', ವಿ.ಬಿ ಅರ್ತಿಕಜೆಯವರ 'ತಿಂದ ಹಕ್ಕಿಯ ಕತೆ', 'ದಡ್ಡಂಗೆ ಒಲಿದ ಅದೃಷ್ಟ' ಎಂಬ ಬಿಡಿ ಕತೆಗಳು, ಉಪ್ಪಂಗಳ ರಾಮ ಭಟ್ಟರ 'ಕೈ ತೂಂಬಿನಲ್ಲಿ ಹಾಕಿದ ಕತೆ' ಈ ಮುಂತಾದುವುಗಳಲ್ಲದೆ ಇನ್ನೂ ಅನೇಕ ಸಾಹಿತ್ಯ ರಚನೆಗಳಿವೆ. ಬಾಳಿಲ ಕೆ. ಪರಮೇಶ್ವರ ಭಟ್ಟರು ಧರ್ಮವಿಜಯ ಎಂಬ ಮಹಾಕಾವ್ಯವನ್ನು ರಚಿಸಿದ್ದಾರೆ. ಚಂದ್ರಶೇಖರ ಕುಳಮರ್ವರು ಸಂಗ್ರಹಿಸಿದ ಜನಪದ ಕತೆಗಳಾದ 'ಕಾಗಕ್ಕ ಗುಬ್ಬಕ್ಕನ ಕತೆ', 'ಪಾಪದ ಕೂಸು ರಾಣಿ ಆದ ಕತೆ', 'ಮೋಟು ಆಡಿನ ಕತೆ', 'ಪಾಪದ ಮಾಣಿ ರಾಜ ಆದ ಕತೆ', 'ಸುಟ್ಟುವಿನ ಕತೆ' – ಇವುಗಳು ಭಾಷೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಮಹತ್ವದ್ದಾಗಿವೆ.

ಪ್ರೊ. ಟಿ. ಕೇಶವ ಭಟ್ಟ ಅವರು ಬರೆದ "ಹವ್ಯಕರ ಶೋಭಾನೆಗಳು" ಕೃತಿಯಲ್ಲಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದ ಶೋಭಾನೆ ಹಾಡುಗಳಿವೆ. ಈ ಹಾಡುಗಳಲ್ಲಿರುವ ದಕ್ಷಿಣ ಕನ್ನಡದ ಶೋಭಾನೆ ಹಾಡುಗಳು ಹವ್ಯಕರೇ ಹೇಳಿದ ಹವ್ಯಕ ಹಾಡುಗಳಾದರೂ ಹೆಚ್ಚಿನವು ಶಿಷ್ಟ ಕನ್ನಡದಲ್ಲಿವೆ. ಆದರೆ ಹವ್ಯಕರ ಆಡುನುಡಿಗಳು ಈ ಶೋಭಾನೆಯಲ್ಲಿ ಕಂಡುಬರುತ್ತವೆ.

**ಉದಾಹರಣೆಗೆ:**

ಅಬ್ಬೆಯ ಮಗ ಬಂದ ಅಬ್ಬಿಲಿ

ನೀರಿಲ್ಲೆ

ಕಬ್ಬಿನ ಕೋಲ ಎಸರ್ಹಿಂಡಿ – ಎಸರ್ಹಿಂಡಿ ಪಾಯಸ ಮಡಗಿ

ಅಬ್ಬೆಯ ಮಗನ ಉಂಬ್ಲೇಳಿ

ಹವ್ಯಕ ಭಾಷೆಯಲ್ಲಿರುವ ಗಾದೆಗಳು ಕರಾವಳಿಯ ಸಾಮಾಜಿಕ ಸಾಂಸ್ಕೃತಿಕ ಅನನ್ಯತೆಗಳನ್ನು, ಜೀವನಾನುಭವಗಳ ಆಳ ಅಗಲವನ್ನು ಮತ್ತು ಕೃಷಿ ಸಂಸ್ಕೃತಿಯ ವಿಶೇಷತೆಗಳನ್ನು ತಿಳಿಸುತ್ತವೆ. ಹವ್ಯಕ ಭಾಷೆಯಲ್ಲಿ ಪ್ರಕಟವಾಗಿರುವ ಸೃಜನಶೀಲ ಕೃತಿಗಳಲ್ಲಿ ಇಂತಹ ಅನೇಕ ಗಾದೆಮಾತುಗಳನ್ನು ಕಾಣಬಹುದು. ಉದಾಹರಣೆಗೆ:

1. ಅಡ್ಕಲ್ಲಿ ಹುಗ್ಗೀರೆ ಕಾಣದ್ದೇ ಇಕ್ಕೋ (ಬಯಲಿನಲ್ಲಿ ಅಡಗಿ ಕುಳಿತರೆ ಕಾಣದೇ ಇದ್ದೀತೆ)
2. ಆರಾರ ಮಕ್ಕೊಗೆ ಮರುಳು ಹಿಡುದರೆ ನೋಡುತ್ತವಕ್ಕೆ ಚೆಂದ. (ಯಾರ್ಯಾರ ಮಕ್ಕಳಿಗೋ ಮರುಳು ಹಿಡಿದ್ರೆ ನೋಡುವವರಿಗೆ ಚಂದ)
3. ಉಂಡಷ್ಟು ಹಶು ಹೆಚ್ಚು, ತಿಂದಷ್ಟು ಕೊದಿ ಹೆಚ್ಚು (ಊಟ ಮಾಡಿದಷ್ಟು ಹಸಿವೆ ಹೆಚ್ಚು, ತಿಂದಷ್ಟು ಕೊದಿ (ಇನ್ನಷ್ಟು ಬೇಕೆನಿಸುವುದು) ಹೆಚ್ಚು )
4. ದಾಕ್ಷಿಣ್ಯಕ್ಕೆ ಬಸರಾದರೆ ಹೆರ್ಲೆ ಜಾಗೆ ಇಲ್ಲೆ (ದಾಕ್ಷಿಣ್ಯಕ್ಕೆ ಬಸುರಾದರೆ ಹೆರಲು ಜಾಗವಿಲ್ಲದಂತೆ)
5. ನಸೆ ಕೊಟ್ಟ ನಾಯಿ ಮುಸುಡು ನಕ್ಕುಗು (ಸಲಿಗೆ ಕೊಟ್ಟ ನಾಯಿ ಮುಖ ನೆಕ್ಕಬಹುದು.)
6. ಸಿಂಹದ ಹೊಟ್ಟೇಲಿ ಕುದುಕ್ಕ ಹುಟ್ಟುತ್ತೋ? (ಸಿಂಹದ ಹೊಟ್ಟೆಯಲ್ಲಿ ನರಿ ಹುಟ್ಟುವುದೇ?)

ಕರಾವಳಿಯ ಕಲೆ ಯಕ್ಷಗಾನದಲ್ಲಿ ಕೆಲವು ಯಕ್ಷಗಾನ ಪ್ರಸಂಗಗಳು ಹವ್ಯಕ ಭಾಷೆಯಲ್ಲಿ ರಚಿತವಾಗಿವೆ. ಅಂಬೆಮೂಲೆ ಗೋವಿಂದ ಭಟ್ಟರು ಐದು ಪ್ರಸಂಗಗಳನ್ನು, ವಿಶ್ವವಿನೋದ ಬನಾರಿಯವರು ನಾಲ್ಕು ಪ್ರಸಂಗಗಳನ್ನು ಮತ್ತು ಇತರ ಹಲವರು ಹಲವಾರು ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾರೆ. ಒಂದು ಸಮುದಾಯದ ಭಾಷೆಯಾಗಿದ್ದರೂ ಕನ್ನಡ ಭಾಷೆಯ ಪ್ರಾಚೀನತೆಯ ಹಲವು ಸೂಕ್ಷ್ಮ ವಿಷಯಗಳನ್ನು ಒಳಗೊಂಡು ಸೃಜನಶೀಲ ಹಾಗೂ ಸೃಜನೇತರ ಹಲವು ಕೃತಿಗಳ ಮಾಧ್ಯಮವಾಗಿರುವ ಹವ್ಯಕ ಭಾಷೆಯ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ವಿಪುಲವಾದ ಅಧ್ಯಯನಕ್ಕೆ ಹಲವು ಸಾಧ್ಯತೆಗಳಿವೆ. ಕರಾವಳಿಯ ಚಾರಿತ್ರಿಕವಾದ ಹಲವು ಸೂಕ್ಷ್ಮಗಳನ್ನು ತಿಳಿಯಲು ಹವ್ಯಕ ಭಾಷೆ ಮತ್ತು ಸಾಹಿತ್ಯ ಅಧ್ಯಯನಗಳಿಂದ ಸಾಧ್ಯವಾಗಬಹುದು.

**ಪರಾಮರ್ಶನ ಗ್ರಂಥಗಳು:**


1. ನಾರಾಯಣ ಶಾನಭಾಗ ಮತ್ತು ಹೆಗಡೆ ಕಡಬಾಳ ಎಸ್.ಐ., ಹವ್ಯಕರು ಕಿರು ಪರಿಚಯ, ಬೆಂಗಳೂರು: ಶ್ರೀ ಹವ್ಯಕ ಮಹಾಸಭಾ (ರಿ.).
2. ತಿಮ್ಮಪ್ಪ ಕಲಸಿ ಎಚ್.ಎಂ., (೨೦೧೨), ಹವ್ಯಕರ ಇತಿಹಾಸ ದರ್ಶನ, ಬೆಂಗಳೂರು: ಹವ್ಯಕ ಅಧ್ಯಯನ ಕೇಂದ್ರ.
3. ಶ್ರೀಕೃಷ್ಣ ಭಟ್ ಅರ್ತಿಕಜೆ ಮತ್ತು ಹರಿಕೃಷ್ಣ ಭರಣ್ಯ (ಸಂ), ನುಡಿ ಸಂಸ್ಕೃತಿ, ಬೆಂಗಳೂರು: ಹವ್ಯಕ ಅಧ್ಯಯನ ಕೇಂದ್ರ.
4. ಹರಿಕೃಷ್ಣ ಭರಣ್ಯ, (೨೦೧೮), ಹವಿಗನ್ನಡ ಸಾಹಿತ್ಯ ಸಮೀಕ್ಷೆ, ಬೆಂಗಳೂರು: ಅನ್ನಪೂರ್ಣೇಶ್ವರಿ ಪ್ರಿಂಟರ್ಸ್.
5. ಮಹಾಲಿಂಗ ಭಟ್ ಬಿ.ಎನ್., (೨೦೦೫), ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಕರ ಸಂಸ್ಕೃತಿ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯ.
6. ಹರಿಕೃಷ್ಣ ಭರಣ್ಯ, (೨೦೧೯), ಹವಿಗನ್ನಡ (ನುಡಿ/ಸಂಸ್ಕೃತಿ/ಸಾಹಿತ್ಯ ಅಧ್ಯಯನ), ಅಂಕನಹಳ್ಳಿ: ನಿಸರ್ಗ ಟ್ರಸ್ಟ್ (ರಿ).
7. ಕೇಶವ ಭಟ್ ಟಿ., (1986), ಹವ್ಯಕರ ಶೋಭಾನೆಗಳು, ಬೆಂಗಳೂರು: ಚಿರಸಾಹಿತ್ಯ ಪ್ರಕಾಶನ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.